ಸೋರುತ್ತಲೆ ಇತ್ತು. ಅವಳು ತುಂಬಿದ ಪಾತ್ರೆಗಳಲ್ಲಿನ ನೀರನ್ನು ಆಚೆ ಚಲ್ಲಿ ಮತ್ತೆ ಅದೇ ಜಾಗದಲ್ಲಿ ಇಡುತ್ತಿದ್ದಳು. ಹೀಗೆ ರಾತ್ರಿಯೆಲ್ಲ ಎದ್ದು ಬಗ್ಗಿ ಓಡಾಡಿ ಹೈರಾಣಾಗಿದ್ದಳು. ರಾತ್ರಿಯ ಕತ್ತಲಲ್ಲಿ ಅದುಮಿಟ್ಟುಕೊಂಡಿದ್ದ ಅವಳೆಲ್ಲ ಭಾವನೆಗಳು ಬೆಳಗಾಗುತ್ತಿದ್ದಂತೆ ಸಿಡಿದು ಸದ್ದು ಮಾಡತೊಡಗಿದವು. ಮಂಜೇಗೌಡ ಆ ಕಡೆ ಹೊರಟಮೇಲೆ ನಂಜಮ್ಮನ ಮನೆಯ ಮುಂದೆ ಹಾದು ಹೋಗುತ್ತಿದ್ದ ನಾಗೇಶ, 'ಏಮಕ್ಕ ಎಪ್ಪುಡೂ ತಿಟ್ಲೇನ ನೀ ನೋಟ್ಲೊ. ಒಕ್ಕ ನಾಡೂ ಗಮ್ಮನುಂಡವಾ...' ಎಂದು ಕೇಳಿದ. ಅದಕ್ಕವಳು, 'ನಾ ಕೊಡಕ, ನೀಕೇಮಿ ತೆಲುಸ್ತಾ ನಾ ಬಾಧ. ಮನೇಕ ಬಂದು ಸೂಡು... ಬೇವಾರ್ಸಿ ಏನ್ ಮಾಡಿದೇಂತ. ಬಂದ್ಬಿಟ್ಟ ಬಡ್ಡೀ ಕೊಡಕು' ಎಂದು ನುಡಿದು ಮೂಗಲ್ಲಿ ಮಡುಗಟ್ಟಿದ್ದ ಸಿಂಬಳವನ್ನು ಸೆರಗಿನಲ್ಲಿ ಸೀದಿ ಕೈಯಿಂದ ಮೂಗನ್ನು ಒರೆಸಿಕೊಂಡಳು. ಸೂರ್ಯನ ಬಿಸಿಲು ತುಸುವೆ ನಂಜಮ್ಮನ ಮನೆಯ ಮೇಲೆ ಬೀಳತೊಡಗಿತು. ಬಹಳ ದಿನಗಳ ನಂತರ ಬಿದ್ದ ಮಳೆಗೆ ಶುಭ್ರಗೊಂಡಿದ್ದ ಊರು ಎಳೆ ಬಿಸಿಲಿಗೆ ಹೊಳೆಯುತ್ತಿತ್ತು. ಎರಡು ಕಾಗೆಗಳು ನಂಜಮ್ಮನ ಮನೆಯ ಮುಂದಿರುವ ವಿದ್ಯುತ್ ತಂತಿಯ ಮೇಲೆ ಕುಳಿತು ರೆಕ್ಕೆಗಳನ್ನು ತುಸುವೆ ಅಗಲಿಸಿ ಎಳೆಬಿಸಿಲಿಗೆ ಪುಕ್ಕಗಳನ್ನು ಒಣಗಿಸಿಕೊಳ್ಳುತ್ತಿದ್ದವು. ಊರ ದೇವಸ್ಥಾನದ ಮುಂದಿರುವ ಅರಳಿ ಮರದಲ್ಲಿ ಕೋತಿಗಳ ಸದ್ದು ಹಿಂದೆಂದಿಗಿಂತ ಭಿನ್ನವಾಗಿತ್ತು. ಪಾಳು ಬಿದ್ದ ಮನೆಯ ಮೇಲಿಂದ ಹಾರಿ ಬಂದ ಒಂಟಿ ಗುಬ್ಬಿಯೊಂದು ಅವಳ ಅಂಗಳದಲ್ಲಿ ಅಡ್ಡಾಡತೊಡಗಿತು. ಎದ್ದು ಒಳಕ್ಕೆ ಹೋದ ನಂಜಮ್ಮ ಒಂದು ಹಿಡಿಯಷ್ಟು ರಾಗಿ ಕಾಳು ತಂದು ಅಂಗಳದಲ್ಲಿ ಹರಡಿದಳು. ಅದು ಸಂಭ್ರಮದಲ್ಲಿ ಹೆಕ್ಕಿ ತಿನ್ನತೊಡಗಿತು.

ನಂಜಮ್ಮನದು ಎಂಟು ವರ್ಷಗಳಿಂದಲು ಒಂಟಿ ಬದುಕೆ. ಗಂಡನೆಂಬೋನು ಸತ್ತು ಮೂವತ್ತು ವರ್ಷಗಳು ಕಳೆದಿವೆ. ಗಂಡ ಸತ್ತ ಮೇಲೆ ತೋಗಟರ ನಾರಾಯಣಪ್ಪನ ಜೊತೆ ಸಲುಗೆಯನ್ನು ಬೆಳೆಸಿಕೊಂಡಿದ್ದಳು. ಅವಳು ನಾರಾಯಣಪ್ಪನನ್ನು ಕರೆಯುತ್ತಿದ್ದುದು, 'ಲೇ ನಾರಾಯ್ಣಿ' ಎಂತಲೆ. ಊರ ಮಂದಿ ಕೂಡ ಅವರಿಬ್ಬರ ನಡುವಿನ ಸಂಬಂಧದ ಕುರಿತಾಗಿ ನಾನಾ ರೀತಿಯಾಗಿ ಮಾತಾಡಿಕೊಂಡಿದ್ದರು. ಅದಕ್ಕೆಲ್ಲ ಅವಳು, 'ಊನ್ರೊ ಬೇವಾರ್ಸಿಗ್ಳ... ಅವ್ನ ಎಣ್ತಿ ಸತ್ತೋನು, ನಾನು ಗಂಡ್ ಸತ್ತ ಮುಂಡೆ... ನಾವ್ ಎಂಗಾರ ಬದುಕ್ತೀವಿ. ಅದ್ನೆಲ್ಲ ಕೇಳಾಕೆ ನೀವ್ಯಾರು? ಇನ್ನೊಂದ್ಕಿತ ನಮ್ಮಿಬ್ಬರ ಬಗ್ಗೆ ಏನಾರ ಗುಸ್ಗುಸು ಮಾತಾಡಿದ್ರೆ ಒಂದೇ ಮನೇಕೆ ವಾಸ ಮಾಡ್ತೀವಿ. ಅದೇನ್ ಅಕ್ಕೋರ್ತೀರೊ ಅಕ್ಕೋರ್ ವೋಗಿ... ಅಲ್ಕಟ್ ನನ್ಮಕ್ಳು, ತವ್ಮಾತ್ರ ಸಾಚಾ ಅನ್ನೋಂಗೆ ಮಾತಾಡ್ತಾವೆ' ಎಂದು ಏರು ದನಿಯಲ್ಲಿ ಮಾತಾಡಿ ಊರ ಸದ್ದಡಗಿಸುತ್ತಿದ್ದಳು. ಮಗ ವೆಂಕಟೇಶನಿಗೂ ನಾರಾಯಣಪ್ಪನನ್ನು ತೋರಿಸಿ, 'ನೋಡೊ ವೆಂಕ್ಟೇಸ ಇವ್ನು ನಿನ್ ಚಿಗಪ್ಪ. ಇನ್ಮೇಕೆ ಚಿಗಪ್ಪ ಅಂತ್ಲೆ ಕರಿ. ಊರು ಏಲೋದ್ನ ತಲೇಗಾಕ್ಕೊಳ್ದೆ ಚಂದಾಕೋದು' ಎಂದು ಹೇಳಿದ್ದಳು. ಅವನು ಹಾಗೂ ಹೀಗೂ ಮಾಡಿ ಬಿ.ಫಾರ್ಮ್ ಮುಗಿಸಿ ಹತ್ತಿರದ ಚಿಂತಾಮಣಿಯ ಮೆಡಿಕಲ್ ಸ್ಟೋರ್ ಒಂದರಲ್ಲಿ ಒಂದಷ್ಟು ವರ್ಷ ಕೆಲಸ ಮಾಡಿದ್ದ. ನಂತರ ನೆಂಟರ ಪೈಕಿ ಒಬ್ಬರು ಒಳ್ಳೆ ಹುಡುಗ ಎಂದು ತಮ್ಮ ಮಗಳನ್ನು ಕೊಟ್ಟು ಹೊಸಕೋಟೆಯಲ್ಲಿ ಮೆಡಿಕಲ್ ಸ್ಟೋರ್ ಹಾಕಿಸಿಕೊಟ್ಟಿದ್ದರು. ನಂಜಮ್ಮನ ಹರಕು ಬಾಯಿ, ಜೊತೆಗೆ ನಾರಾಯಣಪ್ಪನ ಸಹವಾಸ ವೆಂಕಟೇಶನ ಹೆಂಡತಿಗೆ ಹಿಡಿಸದಾಗಿ ಜಪ್ಪಯ್ಯ ಅಂದ್ರು ಆ ಮನೆಗೆ ಕಾಲಿಡುವುದಿಲ್ಲ ಎಂದು ಹಟ ಹಿಡಿದು ಕೂತಿದ್ದಳು. ಒಂದು ಬಾರಿ ಇದೇ ವಿಷಯವಾಗಿ ನಂಜಮ್ಮನ ಜೊತೆ ಜೋರು ಜಗಳ ಮಾಡಿ, 'ಗಂಡ ಸತ್ಮೇಕೆ ಅದ್ರಲ್ಲು ಬೆಳೆದ ಮಗ ಮನೇಲಿದ್ರು ಅವನ್ನ ಮಡಿಕ್ಕಂಡಿದೀಯಲ್ಲ... ಊರಾಕ ಈ ರೀತಿ ಬದ್ಕೋಕೆ ನಾಚ್ಕೆ ಆಗಾಕಿಲ್ಲ